ಸಿ.ಸಿ ನಂ- 809/2012
ಪಿ.ಡಬ್ಲ್ಯೂ- 1 ಸಿಡಬ್ಲ್ಯೂ-3

**ಮೆ: ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ**

**ದಿನಾಂಕ: 07-02-2024 ರಂದು ಸಾಕ್ಷಿಯನ್ನು ಪುನಃ ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು: 4 ನೇ ಆರೋಪಿ ಪರ ಶ್ರೀಮತಿ ಎಚ್.ಕೆ.ವಿ ವಕೀಲರಿಂದ:**

ಪಂಚನಾಮೆಯಲ್ಲಿ ಬರೆದಿರುವ ಮಾಹಿತಿ ನನಗೆ ಇಲ್ಲ ಎಂದರೆ ಬಹಳ ದಿನಗಳು ಆಗಿರುವುದರಿಂದ ನನಗೆ ಅಷ್ಟು ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

ಪೋಲಿಸರು ಬರೆದಿಟ್ಟ ಪಂಚನಾಮೆಗೆ ಸಹಿ ಮಾಡು ಎಂದು ತಿಳಿಸಿದ್ದು ನಾನು ಸಹಿ ಮಾಡಿದ್ದೇನೆ ಎಂದರೆ ಸರಿ.

ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಈ ಹಿಂದೆ ನೋಡಿಲ್ಲ ಎಂದರೆ ಒಬ್ಬರನ್ನು ನೋಡಿದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿ ಯು ನಾ್ಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿದ್ದೇನೆ ಎಂದು ನುಡಿಯುತ್ತಾರೆ. ಉಳಿದ ಆರೋಪಿತರು ಆ ದಿನ ಇರಲಿಲ್ಲ ಎಂದರೆ ಸರಿ.

ನನ್ನ ಸಮಕ್ಷಮ ಯಾವುದೇ ಮಾಲನ್ನು ಜಪ್ತಿ ಮಾಡಿಕೊಂಡಿಲ್ಲ ಎಂದರೆ ಸರಿ, ಸಾಕ್ಷಿಯು ಸ್ವತಃ ನನ್ನನ್ನು ಪೋಲಿಸ ಠಾಣೆಗೆ ಕರೆದು ನಂತರ ಪೋಲಿಸರು ಜ್ಯೋತಿ ಪಾಟೀಲ ಇವರ ಮನೆಗೆ ಕರೆದುಕೊಂಡು ಹೊಗಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ ಮತ್ತು ಮು.ಮಾಲನ್ನು ಜಪ್ತಿಪಡಿಸಿಕೊಂಡಿಲ್ಲ ಎಂದರೆ ಸರಿ. ಪೋಲಿಸರು ಹೇಳಿದಂತೆ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ 3 ಮತ್ತು 5 ನೇ ಆರೋಪಿ ಪರ ವಕೀಲರು ಶ್ರೀ ಎಚ.ಕೆ.ಎಸ್ ವಕೀಲರು 4 ನೇ ಆರೋಪಿ ಪರ ವಕೀಲರ ಮಾಡಿದ ಪಾಟಿ ಸವಾಲನ್ನೆ ಅಳವಡಿಕೊಳ್ಳುತ್ತೇವೆ ಎಂದು ನುಡಿಯುತ್ತಾರೆ.

**ಪಾಟಿ ಸವಾಲುಃ 1 ನೇ ಆರೋಪಿ ಪರ ಶ್ರೀ ಎಸ್.ಬಿ.ಜೆ ವಕೀಲರಿಂದಃ**

1 ನೇ ಆರೋಪಿ ಯಾವ ಊರಿನವನು ಮತ್ತು ಆತನ ವಯಕ್ತಿಕ ಮಾಹಿತಿ ನನಗೆ ಇಲ್ಲ ಎಂದರೆ ಸರಿ. 1 ನೇ ಆರೋಪಿಯನ್ನು ನಾನು ಯಾವುದೇ ಕಾಲಕ್ಕೂ ನೋಡಿಲ್ಲ ಎಂದರೆ ಸಾಕ್ಷಿ ನನ್ನು ಪೋಲಿಸ ಠಾಣೆಗೆ ಕರೆದುಕೊಂಡು ಹೋಗಿದ್ದು ನಂತರ ಜ್ಯೊತಿ ಪಾಟಿಲ ಅವರ ಮನೆಯ ಮುಂದೆ ನೋಡಿದ್ದೇನೆ ಎಂದು ನುಡಿಯುತ್ತಾರೆ. ಜ್ಯೊತಿ ಪಾಟಿಲ ರವರ ಬಗ್ಗೆ ವಯಕ್ತಿಕ ಮಾಹಿತಿ ಇಲ್ಲ ಎಂದರೆ ನನಗೆ ಅವರೂ ಪರಿಚಯ ನನ್ನ ಸ್ನೇಹಿತ ನಿಶಾಂತ ಹೋಸೂರ ಇವರ ಮನೆಯಲ್ಲಿ ಬಾಡಿಗೆ ಇರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜ್ಯೊತಿ ಪಾಟಿಲ ರವರು ಪರಿಚಯ ಇರುವುದರಿಂದ ಅವರಿಗೆ ಸಹಾಯ ಮಾಡಲು 1 ನೇ ಆರೋಪಿಯನ್ನು ಇದೆ ಮೋದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದರೂ ಸಹ ಅವರ ಮನೆಯ ಮುಂದೆ ನೋಡಿದ್ದೇನೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಇದೆ ಮೊದಲ ಬಾರಿಗೆ ನ್ಯಾಯಾಲಯಕ್ಕೆ ಪಂಚನಾಗಿ ಸಾಕ್ಷ ನುಡಿಯಲು ಬಂದಿದ್ದೇನೆ.

ಪೋಲಿಸರು ಈ ಪ್ರಕಣದಲ್ಲಿ ಪಂಚನಾಗಿ ನೇಮೀಸಿಲ್ಲ ಠಾಣೆಗೆ ಕರೆಸಿಲ್ಲ ಪಂಚನಾಮೆ ನೇಮಿಸಿಲ್ಲ ಎಂದರೆ ಸರಿಯಲ್ಲ. ಪೋಲಿಸರಿಗೆ ಮತ್ತು ಜ್ಯೊತಿ ಪಾಟಿಲ ಇವರಿಗೆ ಸಹಾಯ ಮಾಡಲು ಅವರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ